# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಕವಿಪ್ರನಿನಿ/ಬಿ93/35989/2020-21/ ೮೪೬೦೪

ನಿಗಮ ಕಾರ್ಯಾಲಯ,
ಕಾವೇರಿ ಭವನ, ಬೆಂಗಳೂರು.
ದಿನಾಂಕ: 16 APR 2021

**NDCPS ಅಧಿಕಾರಿ/ನೌಕರರ ವೈಯಕ್ತಿಕ ಗಮನಕ್ಕೆ**

**ಸುತ್ತೋಲೆ**

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ/ ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ(PPAN) ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆಯ ಪರಿಷ್ಕೃತ ವಿವರಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 4/ಪಿಇಟಿ 2005 ದಿನಾಂಕ: 31.03.2006
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05.07.2007
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ: 21.08.2007
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2016-17 ದಿನಾಂಕ: 21.02.2017
5. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಕೆಸಿಒ-129/83020/2017-18 ದಿನಾಂಕ: 23.11.2017
6. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2018-19/ಸಿವೈಎಸ್-11 ದಿನಾಂಕ:08.05.2018.

*****

ಉಲ್ಲೇಖ 2ರ ನಿಗಮದ ಆದೇಶದಲ್ಲಿ, ಕವಿಪ್ರನಿನಿ/ವಿಸಕಂಗಳಲ್ಲಿ ದಿನಾಂಕ:01.04.2006 ರಂದು ಮತ್ತು ನಂತರ ಸೇವೆಗೆ ಸೇರಿದ ಅಧಿಕಾರಿ / ನೌಕರರಿಗೆ ಸದರಿ ದಿನಾಂಕದಿಂದ ಅಂದರೆ ದಿನಾಂಕ:01.04.2006 ರಿಂದ ಅನ್ವಯವಾಗುವಂತೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು (NDCPS) ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿ ಸಂಬಂಧಿಸಿದ ನೌಕರರು / ಅಧಿಕಾರಿಗಳಿಂದ ಮೂಲ ವೇತನ (ಡಿ.ಪಿ. ಒಳಗೊಂಡಂತೆ) ಮತ್ತು ತುಟ್ಟಿಭತ್ಯೆಯ ಮೊತ್ತದ ಮೇಲೆ ಶೇಕಡ 10 ರಷ್ಟು ವಂತಿಗೆ ಪಡೆದು ದಿನಾಂಕ:31.03.2018ರವರೆಗೆ ಅದಕ್ಕೆ ಸಮನಾದ ಕಂಪನಿಯ ವಂತಿಗೆಯನ್ನು ಹಾಗೂ ದಿನಾಂಕ:01.04.2019 ರಿಂದ ಶೇಕಡ 14 ರಷ್ಟು ಕಂಪನಿಯ ವಂತಿಗೆಯನ್ನು ಸೇರಿಸಿ ನಿಧಿಯಲ್ಲಿ ಜಮಾವಣೆ ಮಾಡಲಾಗುತ್ತಿದೆ.

ನಿಗಮದ ಆದೇಶ ದಿನಾಂಕ:04.05.2015 ರಲ್ಲಿ ಈ ಯೋಜನೆಯ ನಿರ್ವಹಣೆಯನ್ನು LIC-P&GS Unit ಗೆ ವಹಿಸಲಾಗಿದೆ. LIC-P&GS Unit ಸಂಸ್ಥೆಯು ನೌಕರವಾರು / ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಯೋಜನೆ ವ್ಯಾಪ್ತಿಯ ಫಲಾನುಭವಿಗಳು ತಂತ್ರಾಂಶದ ಮೂಲಕ ವೀಕ್ಷಿಸಲು LIC ಸಂಸ್ಥೆಯು ಅಗತ್ಯ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಕಾರ್ಯದ ಅಂತಿಮ ಹಂತದಲ್ಲಿದ್ದು, ತದನಂತರ ನೌಕರವಾರು/ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಬಡ್ಡಿ ಗಳಿಕೆಯ ಸಹಿತ ಯೋಜನೆಯ ಫಲಾನುಭವಿಗಳು ತಿಳಿಯಬಹುದಾಗಿದೆ.

ಈ ಯೋಜನೆ ವ್ಯಾಪ್ತಿಯ ನೌಕರರು/ಅಧಿಕಾರಿಗಳ ದಿನಾಂಕ:01.04.2006 ರಿಂದ 30.06.2016ರ ವರೆಗಿನ ಪಿಂಚಣಿ ವಂತಿಗೆ ವಿವರಗಳನ್ನು ಕವಿಪ್ರನಿನಿ ಜಾಲತಾಣದಲ್ಲಿ ಈ ಹಿಂದೆಯೇ ಪ್ರಕಟಿಸಿ, ಈ ಕಛೇರಿಯ ದಿನಾಂಕ:21.02.2017ರ (ಉಲ್ಲೇಖ-) ಸುತ್ತೋಲೆಯಲ್ಲಿ ಜಾಲತಾಣ ಆಧಾರಿತ ತಂತ್ರಾಂಶದಲ್ಲಿ ವೀಕ್ಷಿಸಲು ಅನುಸರಿಸಬೇಕಾದ ಕ್ರಮಗಳೊಂದಿಗೆ, ವಂತಿಗೆ ವಿವರಗಳಲ್ಲಿ ನ್ಯೂನ್ಯತೆಗಳು ಕಂಡುಬಂದಲ್ಲಿ ಅಥವಾ ಆಕ್ಷೇಪಣೆಗಳೇನಾದರು ಇದ್ದಲ್ಲಿ ಮನವಿಗಳನ್ನು ಸಲ್ಲಿಸಲು ಸಹಾ ಸೂಚಿಸಲಾಗಿತ್ತು. ಮೇಲಿನ ಸುತ್ತೋಲೆಯನ್ವಯ ಅಧಿಕಾರಿ/ನೌಕರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ ಸರಿಪಡಿಸಲಾಗಿತ್ತು. ತದನಂತರ ಸಹಾ ಹಲವು ಮನವಿಗಳನ್ನು ಸಲ್ಲಿಸಿ ನ್ಯೂನ್ಯತೆಗಳನ್ನು ಸರಿಪಡಿಸಲು ಅಧಿಕಾರಿ/ನೌಕರರು ಆಕ್ಷೇಪಣೆಗಳನ್ನು ಸಲ್ಲಿಸಿದ್ದನ್ನು ಗಣನೆಗೆ ತೆಗೆದುಕೊಂಡು, ಅಧಿಕಾರಿ/ನೌಕರರ ಹಿತದೃಷ್ಟಿಯಿಂದ ಮತ್ತೊಮ್ಮೆ ದಿನಾಂಕ:01.04.2006 ರಿಂದ 30.06.2016 ರವರೆಗಿನ ಎನ್‌ಡಿಸಿಪಿಎಸ್ ವಂತಿಗೆಯನ್ನು ವಿಭಾಗ ಮಟ್ಟದಲ್ಲಿ ಸಲ್ಲಿಸಲಾಗಿರುವ ಅನುಬಂಧ-4ಕ್ಕು ಮತ್ತು ತಂತ್ರಾಂಶದಲ್ಲಿ ಅಧಿಕಾರಿ/ನೌಕರರ ಪಿಪಿಎಎನ್ ಖಾತೆಯಲ್ಲಿರುವ ವಂತಿಗೆಗೂ ಸಮನ್ವಯ (Re-concile) ಮಾಡಿ ಪರಿಷ್ಕೃತ ವಂತಿಗೆ ವಿವರಗಳನ್ನು ಕವಿಪ್ರನಿನಿ ಜಾಲತಾಣ ಆಧಾರಿತ ತಂತ್ರಾಂಶದಲ್ಲಿ ವೀಕ್ಷಿಸಲು ಅನುವು ಮಾಡಲಾಗಿದೆ.

ಈಗಾಗಲೇ ಮೇಲೆ ತಿಳಿಸಿರುವಂತೆ, ಎಲ್ಲಾ ಲೆಕ್ಕ ಘಟಕಗಳು ಮತ್ತು ಈ ಯೋಜನೆಯ ಫಲಾನುಭವಿಗಳು ಪಿಂಚಣಿ ವಂತಿಗೆ ವಿವರಗಳನ್ನು ಪ್ರಕಟಿಸಲಾಗಿರುವ ತಂತ್ರಾಂಶದಿಂದ ಪಡೆದು ಅದು ಸರಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ.

ದಿನಾಂಕ:01.04.2006 ರಿಂದ ದಿನಾಂಕ:30.06.2016ರ ವರೆಗಿನ ಪರಿಷ್ಕೃತ ಮಾಸಿಕ ಪಿಂಚಣಿ ವಂತಿಗೆ ವಿವರಗಳಲ್ಲಿ ಈ ಕಚೇರಿಗೆ ಸಲ್ಲಿಸಿದ್ದ ಅನುಬಂಧ-4ರನ್ವಯ ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ, ಸಮುಚಿತ ಮಾರ್ಗದಲ್ಲಿ (through proper channel) ಮನವಿಯನ್ನು **ದಿನಾಂಕ:30.04.2021ರ** ಒಳಗಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸುವುದು. **ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ವೀಕರಿಸಿದ ಮನವಿ ಪತ್ರಗಳ ಪರಿಶೀಲನಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ನಿರ್ಣಯಿಸಲಾಗಿದೆ.** ಆ ನಂತರ ವಿವರಗಳನ್ನು ತಿದ್ದುಪಡಿ ಮಾಡಲು ಸಾಧ್ಯವಾಗುವುದಿಲ್ಲವೆಂದು, ಇದು ಅಂತಿಮ ಅವಕಾಶ ಎಂದು ತಿಳಿಯಪಡಿಸಲಾಗಿದೆ.

ಈ ಯೋಜನೆಯ ಫಲಾನುಭವಿಗಳಲ್ಲಿ ಗಣಕ ಯಂತ್ರವನ್ನು ಉಪಯೋಗಿಸಲು ಬಾರದೆ ಇರುವವರು ಇದ್ದಲ್ಲಿ, ಅಂತಹವರ ಪಿಂಚಣಿ ವಂತಿಗೆ ವಿವರಗಳನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಪಡೆದು ನೌಕರರಿಗೆ ಮಾಹಿತಿ ನೀಡಿ ಸ್ವೀಕೃತಿ ಪಡೆಯುವುದು.

ಈ ಸುತ್ತೋಲೆಯನ್ನು ಲೆಕ್ಕ ಘಟಕಗಳ ಮತ್ತು ತಮ್ಮ ವ್ಯಾಪ್ತಿಯ ಇತರೆ ಕಚೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಚುರ ಪಡಿಸುವ ಜೊತೆಗೆ ಸಂಬಂಧಿಸಿದ ಎಲ್ಲಾ ನೌಕರರಿಗ ವಿಷಯ ತಿಳಿಸಲು ಮೊಬೈಲ್ ಸಂದೇಶ, ಕಂಪನಿ ಮಟ್ಟದಲ್ಲಿ/ಲೆಕ್ಕ ಘಟಕ ಮಟ್ಟದಲ್ಲಿ ಸುತ್ತೋಲೆ ಹೊರಡಿಸುವುದು, ತಮ್ಮ ಅಧೀನದ ಎಲ್ಲಾ ಕಚೇರಿ ಮುಖ್ಯಸ್ಥರಿಗೆ ಸೂಚಿಸುವುದು, ಅಧಿಕಾರಿಗಳ ಮಾಸಿಕ ಸಭೆಗಳಲ್ಲಿ ವಿಷಯ ತಿಳಿಸುವುದು ಮತ್ತು ಇತರೆ ಮಾರ್ಗಗಳ ಮುಖೇನ ಸರ್ವ ಪ್ರಯತ್ನ ಮಾಡುವಂತೆ ಕೋರಿದೆ.

ಆರ್ಥಿಕ ಸಲಹೆಗಾರರು
(ಎನ್‌ಡಿಸಿಪಿಎಸ್)

**ಪ್ರತಿಗಳು:**

1. ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹಮತ್ತುವಾ), ಬೆವಿಕಂ/ ಮುಖ್ಯ ಆರ್ಥಿಕ ಅಧಿಕಾರಿಗಳು, ಎಸ್ಕಾಂಗಳು.

3. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಎಸ್ಕಾಂಗಳು, ಪಿಸಿಕೆಎಲ್ ರವರ ಆಪ್ತ ಕಾರ್ಯದರ್ಶಿರವರಿಗೆ. ವ್ಯವಸ್ಥಾಪಕ ನಿರ್ದೇಶಕರು ರವರ ಗಮನಕ್ಕೆ ತರುವಂತೆ ಕೋರಲಾಗಿದೆ.
4. ನಿರ್ದೇಶಕರು(ಹಣಕಾಸು), ಬೆವಿಕಂ/ ಹುವಿಸಕಂ ರವರ ಆಪ್ತ ಕಾರ್ಯದರ್ಶಿರವರಿಗೆ. ನಿರ್ದೇಶಕರು(ಹಣಕಾಸು) ರವರ ಗಮನಕ್ಕೆ ತರುವಂತೆ ಕೋರಲಾಗಿದೆ.
5. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿರವರಿಗೆ. ವ್ಯವಸ್ಥಾಪಕ ನಿರ್ದೇಶಕರು ರವರ ಗಮನಕ್ಕೆ ತರುವಂತೆ ಕೋರಲಾಗಿದೆ.
6. ನಿರ್ದೇಶಕರು(ಹಣಕಾಸು), ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿರವರಿಗೆ. ನಿರ್ದೇಶಕರು(ಹಣಕಾಸು) ರವರ ಗಮನಕ್ಕೆ ತರುವಂತೆ ಕೋರಲಾಗಿದೆ.
7. ನಿರ್ದೇಶಕರು(ಆ&ಮಾ.ಸಂ), ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿರವರಿಗೆ. ನಿರ್ದೇಶಕರು(ಆ&ಮಾ.ಸಂ) ರವರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ http:/www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

6. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
7. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
9. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
10. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಪರಿಶೋಧನೆ) ಕವಿಪ್ರನಿನಿ / ಎಸ್ಕಾಂಗಳು